# ಅಧ್ಯಾಯ : ೧೨

## ಪ್ರಕಟಣೆಗಳು

* ನವಜ್ಯೋತಿ
* ಸ್ನೇಹಜ್ಯೋತಿ
* ಅಮರವಾಣಿ

The history of mission is the history of the Church. Its failing are also reflected in her mission. Its compromises with the "world" have hindered her mission to people. Yet the positive far outweighs the negative.

***– Following Christ in Mission, P.242***

# ನವಜ್ಯೋತಿ ನಡೆದು ಬಂದ ಹಾದಿ

1969ನೆಯ ಇಸವಿ ಚಿಕ್ಕಮಗಳೂರು ಧರ್ಮಕ್ಷೇತ್ರ ಹೊಸದಾಗಿ ರೂಪತಳೆದು ಈಗಾಗಲೇ ಐದು ವರ್ಷಗಳು ಕಳೆದಿದ್ದವು. ನೂತನ ಧರ್ಮಕ್ಷೇತ್ರ ವಿನೂತನ ಯೋಚನೆಗಳೊಂದಿಗೆ ನವನವೀನ ಯೋಜನೆಗಳನ್ನು ರೂಪಿಸಿಕೊಂಡಿತ್ತು. ವಿವಿಧ ಧರ್ಮಕೇಂದ್ರಗಳು ಹುರುಪಿನ, ಉತ್ಸಾಹದ ಚಿಲುಮೆಗಳಂತೆ ಕಾರ್ಯಚಟುವಟಿಕೆಗಳಿಂದ ಕೂಡಿದ್ದವು. ಹೊಸ ಧರ್ಮಕ್ಷೇತ್ರ, ನೂತನ ಧರ್ಮಾಧ್ಯಕ್ಷರು, ಹೊಸ ಅನುಭವ, ಲವಲವಿಕೆಯ ವಾತಾವರಣ. ಮೈಸೂರಿನ ದೂತ, ಬೆಂಗಳೂರಿನ ಕರ್ನಾಟಕ ತಾರೆಯಂತಹ ಮಾಸಿಕಗಳಿದ್ದರೂ ಹೊಸ ಮಾಸಿಕವಿದ್ರೆ ಹೊಸ ಹೊಸ ವಿಚಾರಗಳನ್ನು, ಬಿಸಿಬಿಸಿ ಸುದ್ದಿಗಳನ್ನು ಪ್ರಕಟಿಸಬಹುದಾಗಿತ್ತಲ್ಲ ಎಂಬ ಒಳಗುದಿ ಎಲ್ಲರಲ್ಲಿತ್ತು. ಇದಕ್ಕೊಂದು ಆಕಾರ ಕೊಟ್ಟು 'ನವಜ್ಯೋತಿ' ಎಂಬ ಪತ್ರಿಕೆಯನ್ನು ಚಿಕ್ಕಮಗಳೂರಿನ ಪ್ರಥಮ ಧರ್ಮಾಧ್ಯಕ್ಷರಾದ ಪೂಜ್ಯ ಅಲ್ಫೋನ್ಸ್ ಮತಿಯಾಸ್‌ರವರು ಹುಟ್ಟು ಹಾಕಲು ಕಾರಣರಾದರು.

**ಧರ್ಮಾಧ್ಯಕ್ಷರ ಸಂಪರ್ಕಸೇತುವೆ – ನವಜ್ಯೋತಿ :** ಪೂಜ್ಯ ಧರ್ಮಾಧ್ಯಕ್ಷರು ತಮ್ಮ ಧರ್ಮಕ್ಷೇತ್ರದ ಗುರುಕನ್ಯಾಸ್ತ್ರೀಯರನ್ನು ಮಾತ್ರವಲ್ಲ ಪ್ರತಿಯೊಬ್ಬ ಶ್ರೀಸಾಮಾನ್ಯನನ್ನೂ ಭೇಟಿಯಾಗಿ ಅವರ ಸಂಪರ್ಕದಲ್ಲಿರಬೇಕೆಂಬ ಆಸೆ ಅವರದ್ದು. ಆದರೆ ಆಸೆಗಳೆಲ್ಲಾ ಅಶ್ವಗಳಾದರೆ ಭಿಕ್ಷುಕರೂ ಸವಾರಿ ಮಾಡಬಹುದಲ್ಲವೆ? ಮೂರು ಜಿಲ್ಲೆಗಳುಳ್ಳ ಈ ವಿಶಾಲವಾದ ಧರ್ಮಕ್ಷೇತ್ರದಲ್ಲಿ ಎಲ್ಲರೊಂದಿಗೆ ಅಷ್ಟೊಂದು ಸನಿಹದ ಸಂಪರ್ಕವನ್ನು ಇಟ್ಟುಕೊಳ್ಳುವುದಾದರೂ ಹೇಗೆ? ಈ ಪ್ರಶ್ನೆಗೆ ಹೊಳೆದ ಉತ್ತರ – ನವಜ್ಯೋತಿ. ನವಜ್ಯೋತಿಯ ಪ್ರಥಮ ಸಂಚಿಕೆಯಲ್ಲೇ ಅವರು ಹೀಗೆಂದು ಬರೆದರು : "ಈ ನವಜ್ಯೋತಿ ಪತ್ರಿಕೆ ನನ್ನ ವಾಣಿಯನ್ನು ನಿಮಗೆಲ್ಲರಿಗೂ ಮುಟ್ಟಿಸಿ ನಿಮ್ಮ ಮಧ್ಯೆ ನಾನಿರುವಂತೆ ಮಾಡುವುದೇ ಧರ್ಮಾಕ್ಷೇತ್ರವೆಂಬ ಈ ಕುಟುಂಬದ ತಲೆಯಾಗಿ ಈ ಕ್ಷೇತ್ರದ ಪಾಲಕನಾದ ನನಗೆ ಅತ್ಯಾನಂದವೀಯುವ ವಿಚಾರ. ಆದಷ್ಟು ಬಾರಿ ಬರೆಯಲು ನಾನು ಪ್ರಯತ್ನಿಸುವೆನು. ಧರ್ಮಕೇಂದ್ರಗಳಿಗೆ ನಾನು ಸಂದರ್ಶನವೀಯುವುದು ಯಾವಾಗಲ್ಲೊಮ್ಮೆ; ನಿಮ್ಮ ಕುಟುಂಬಗಳಿಗಂತೂ ಅಪರೂಪ. ಆದರೂ ಈ ಮೊದಲೇ ನಿಮಗಿತ್ತ ವಾಗ್ದಾನದ ಪ್ರಕಾರ ಪ್ರತಿನಿತ್ಯವೂ ನಿಮ್ಮೆಲ್ಲರನ್ನು ಸ್ಮರಿಸಿ ನನ್ನ ನಿವಾಸ 'ಜ್ಯೋತಿನಿಲಯ'ದಲ್ಲಿರುವ ಚಿಕ್ಕದೇವಾಲಯದಲ್ಲಿ ದಿವ್ಯ ಬಲಿಪೂಜೆಯ ವೇಳೆಯಲ್ಲಿ ನಿಮಗಾಗಿ ಪ್ರಾರ್ಥಿಸುತ್ತೇನೆ. ಇನ್ನು ನಿಮಗೆ ಸಂದರ್ಶನವೀಯಬೇಕೆಂದು

ನನಗೆ ತೋಚಿದಾಗ ಈ ನವಜ್ಯೋತಿಯ ಮೂಲಕ ಹಾಗೆ ಮಾಡುವುದು ಸಾಧ್ಯ. ಈ ನವಜ್ಯೋತಿಯು ನನ್ನ ಆಚಾರ ವಿಚಾರಗಳನ್ನು, ಸುಖದುಃಖಗಳನ್ನು ನಿಮಗೆ ತಲುಪಿಸುವುದು....."

ಆಗ ವಂದನೀಯ ಮಾರ್ಸೆಲ್ ಜೆ. ಪಿಂಟೋರವರು ಚಿಕ್ಕಮಗಳೂರಿನ ಸಂತ ಜೋಸೆಫರ ಪ್ರೌಢಶಾಲೆಯ ಮುಖ್ಯೋಪಧ್ಯಾಯರಾಗಿದ್ದರು. ಎಲೆಮರೆಯ ಕಾಯಿಯಂತೆ ತೆರೆಯ ಮರೆಯಲ್ಲಿ ನಿಂತು ಕಾರ್ಯವೆಸಗುವುದು ಅವರ ವೈಖರಿ. ಸ್ವತಃ ಬರಹಗಾರರೂ ಆಗಿದ್ದ ಅವರನ್ನು ನವಜ್ಯೋತಿಯನ್ನು ಬೆಳಗಿಸಿ ಪ್ರಕಾಶಿಸಲು ಆಯ್ಕೆ ಮಾಡಿದ್ದು ಸ್ವಾಗತಾರ್ಹ.

ಧರ್ಮಾಧ್ಯಕ್ಷರ ಆಣತಿಯಂತೆ ಸ್ವಾಮಿ ಮಾ. ಜೆ. ಪಿಂಟೋರವರು ಪತ್ರಿಕೆಗೆ ಅಗತ್ಯವಾಗಿ ಬೇಕಾಗಿದ್ದ ಸರ್ಕಾರದ ಹಾಗೂ ಅಂಚೆ ಕಛೇರಿಯ ಅನುಮತಿಯನ್ನು ಪಡೆದರು. ಡಿಸೆಂಬರ್ 1969ರಲ್ಲಿ ಪತ್ರಿಕೆಯ ಮುದ್ರಣಕಾರ್ಯ ಪ್ರಾರಂಭವಾಯಿತು. ಪತ್ರಿಕೆಯ ಹೆಸರಿನ ಕಲ್ಲಚ್ಚು ಸಿದ್ಧವಾಗಿ ಬಂತು. ಆಗಲೇ ಹಾಸನದ ಸಿಸ್ಟರ್ ಎಂ. ರೀಟಾ (ಸಿರಿ), ಸ್ವಾಮಿ ಇಗ್ನೇಷಿಯಸ್ ಡಿಕೋಸ್ತಾ, ಕಿಡಿ, ಸಿಮೇರಿರವರಿಂದ ಲೇಖನಗಳೂ ಬಂದವು. ಧರ್ಮಕೇಂದ್ರಗಳಿಂದ 'ಎಲ್ಲಿ–ಏನು' ವಿಭಾಗಕ್ಕೆ ಸುದ್ದಿಗಳೂ ಸೇರಿದವು. ಚಿಕ್ಕಮಗಳೂರಿನ ಜ್ಯೋತಿನಗರ ಬಡಾವಣೆಯಲ್ಲಿರುವ 'ಜ್ಯೋತಿನಿಲಯ'ದಿಂದ ಹೊರಡುವ 'ನವಜ್ಯೋತಿ'ಯನ್ನು ಇಂದಿರಾಗಾಂಧಿ ರಸ್ತೆಯ ಶ್ರೀಜ್ಯೋತಿ ಪವರ್ 'ಪ್ರೆಸ್ಸಿನ ಮಾಲೀಕರಾದ ಶ್ರೀ ಬಸವರಾಜ್ ಅವರು ಮುದ್ರಿಸಿದರು. ನವಜ್ಯೋತಿ ಬೆಳಗತೊಡಗಿತು. ಅಂದು ಡಿಸೆಂಬರ್ 29 ರಾತ್ರಿ 8ಕ್ಕೆ 'ನವಜ್ಯೋತಿ'ಯ ಪ್ರಥಮ ಚಾರಿತ್ರಿಕ ಪ್ರತಿ ಲೋಕಾರ್ಪಣೆಯಾಯಿತು.

ಡಿಸೆಂಬರ್ 30, 1970 ಶೆಟ್ಟಿಹಳ್ಳಿಯ ಪುರಾತನ (ಈಗ ಗೊರೂರು ಅಣೆಕಟ್ಟಿನಿಂದ ಮುಳುಗಡೆಯಾಗಿರುವ) ದೇವಾಲಯದಲ್ಲಿ ವಂದನೀಯ ಪಾಸ್ಕಲ್ ಮರಿಯಪ್ಪರವರಿಗೆ ಯಾಜಕ ದೀಕ್ಷೆಯನ್ನು ಪ್ರಧಾನಿಸಿದ ನಂತರ ನಡೆದ ಅಭಿನಂದನ ಸಮಾರಂಭದಲ್ಲಿ 'ನವಜ್ಯೋತಿ' ಬಿಡುಗಡೆ ಮಾಡಿ ನವಗುರು ಪಾಸ್ಕಲ್‌ರವರ ಕೈಗೆ ಪ್ರಥಮ ಚಾರಿತ್ರಿಕ ಪ್ರತಿಯನ್ನು ನೀಡಿದರು.

ಹೀಗೆ ಚಿಕ್ಕಮಗಳೂರು ಧರ್ಮಕ್ಷೇತ್ರವು ಸುವಾರ್ತಾಪ್ರಸಾರದ ಉದ್ದೇಶವನ್ನಿಟ್ಟು ಕೊಂಡು ಕನ್ನಡವನ್ನೇ ಆರಾಧನಾವಿಧಿಯ ಪ್ರಮುಖ ಹಾಗೂ ಅಧಿಕೃತ ಭಾಷೆಯನ್ನಾಗಿ ಅಂಗೀಕರಿಸಿ ಕನ್ನಡ ಮಾಸಪತ್ರಿಕೆಯೊಂದನ್ನು ಪ್ರಾರಂಭಿಸಿ ಧರ್ಮಕ್ಷೇತ್ರದ ಕನ್ನಡ ಮಾತೃಭಾಷೆಯ ಪ್ರಥಮ ಗುರುಗಳ ಯಾಜಕ ದೀಕ್ಷೆಯ ಸುಸಂಭರ್ಧದಲ್ಲಿ ಕನ್ನಡ ಕ್ರೈಸ್ತ ಧರ್ಮಕೇಂದ್ರವೊಂದರಲ್ಲಿ ಬಿಡುಗಡೆಗೊಂಡು ವಾಚಕರ ಕೈಸೇರುವಂತಾಯಿತು. ಮುಂದೆ ಇದೇ ಸ್ವಾಮಿ ಪಾಸ್ಕಲ್ ಮರಿಯಪ್ಪನವರು ಹನ್ನೆರಡು ವರ್ಷಗಳ ಸುದೀರ್ಘ ಕಾಲ 'ನವಜ್ಯೋತಿ'ಯ ಸಂಪಾದಕರಾಗಿ ಅದನ್ನು ನಡೆಸಿದ್ದು ಅವರ ಸುಯೋಗ.

ಹೊಸ ಪತ್ರಿಕೆಯನ್ನು ನಡೆಸಿಕೊಂಡು ಹೋಗುವುದೇನೂ ಅಷ್ಟೊಂದು ಸುಲಭವಾದ ಕಾರ್ಯವಾಗಿರಲಿಲ್ಲ. ಪ್ರೌಢಶಾಲೆಯೊಂದರ ಪ್ರಾಂಶುಪಾಲರಾಗಿ ಸ್ವಾಮಿ ಮಾರ್ಸೆಲ್ ಪಿಂಟೊರವರು ಅನೇಕ ಎಡರು ತೊಡರುಗಳನ್ನು ಎದುರಿಸಬೇಕಾಗಿ ಬಂದರೂ ಮೂರು ವರ್ಷಗಳವರೆಗೆ, ಅಂದರೆ 1973ರ ಮಾರ್ಚ್ ಮಾಹೆಯ ತನಕ ನವಜ್ಯೋತಿಯ ಸಾರಥಿಯಾಗಿ ಬರೆದರು, ಬರೆಯಿಸಿದರು. ಹೊಸ ಅಂಕಣವನ್ನು ತೆರೆದರು. ಮೊನ್ಸಿಜ್ಞೊರ್ ಜೆರೊಮ್ ಫೆರ್ನಾಂಡಿಸ್, ಸ್ವಾಮಿ ಇಗ್ನೇಷಿಯಸ್ ಡಿಕೋಸ್ಟಾ, ವಂದನೀಯ ಪಾಸ್ಕಲ್ ಮರಿಯಪ್ಪ, ಸಿಸ್ಟರ್ ರೀಟಾ, ಮೈಕಲ್ ಲೋಬೊ, ಇಸಿದೊರ್ ಪಿಂಟೊ, ಕು. ಡೋರಾ, ವಂ. ಜೇಮ್ಸ್ ಕುರಿಸಿಂಕಲ್ ವಂ. ಜಾ. ಡಿಸೋಜಾ, ವಂ. ತೋಮಸ್ ಮಾರ್ಟಿಸ್ ಅಂದಿನ ಪ್ರಮುಖ ಲೇಖಕರಾಗಿದ್ದರು.

1973ರ ಏಪ್ರಿಲ್ ಮಾಹೆಯಿಂದ 1984 ಮೇ ಮಾಸಾಂತ್ಯದ ತನಕ ವಂದನೀಯ ಸ್ವಾಮಿ ಪಾಸ್ಕಲ್ ಮರಿಯಪ್ಪನವರು ನವಜ್ಯೋತಿಯ ಸಾರಥಿಯಾಗಿ ಕರ್ನಾಟಕದ ಉದ್ದಗಲಕ್ಕೂ ನವಜ್ಯೋತಿಯ ಕಿರಣಗಳನ್ನು ಪಸರಿಸಿದರು. ನಾನೂರು–ಐನೂರು ಪ್ರತಿಗಳು ಪ್ರಕಟವಾಗುತ್ತಿದ್ದವು.

ದ್ವಿತೀಯ ವ್ಯಾಟಿಕನ್ ವಿಶ್ವಸಭೆಯ ಮಹತ್ವಪೂರ್ಣ ಬದಲಾವಣೆಗಳು ಜನಜೀವನದಲ್ಲೂ ಆರಾಧನೆ ವಿಧಿಯಲ್ಲೂ ಆಗಷ್ಟೇ ಪ್ರವೇಶಿಸಿದ್ದವು. ವಿಶೇಷವಾಗಿ ಪೂಜಾರಾಧನೆ ಹಾಗೂ ಸಲಹಾ ಸಮಿತಿಯ ರಚನೆಯಲ್ಲಿ, ಧರ್ಮಕೇಂದ್ರದ ನಿರ್ವಹಣಾಕಾರ್ಯದಲ್ಲಿ ಹೊಸ ಗಾಳಿ ಬೀಸಲಾರಂಭಿಸಿ ಗೊಂದಲಮಯ ವಾತಾವರಣ ಉಂಟಾಗಿತ್ತು. ಇಂತಹ ಸಂದರ್ಭದಲ್ಲಿ ಸ್ವಾಮಿ ಪಾಸ್ಕಲ್ ಮರಿಯಪ್ಪನವರ ಸಂಪಾದಕತ್ವದಲ್ಲಿ ನವಜ್ಯೋತಿ ಅತ್ಯುತ್ತಮ ಸೇವೆ ಮಾಡಿತು. ಪ್ರಾರಂಭದಲ್ಲಿ ಮಲ್ಲಂದೂರು ಧರ್ಮಕ್ಷೇತ್ರದ ಧರ್ಮಗುರುವಾಗಿಯೂ ಅನಂತರ ಧರ್ಮಕ್ಷೇತ್ರದ ಧರ್ಮೋಪದೇಶ ಹಾಗೂ ಶ್ರೀಗ್ರಂಥ ಸೇವಾ ನಿರ್ದೇಶಕರಾಗಿಯೂ 'ನವಜ್ಯೋತಿ'ಯ ಕೆಲಸವನ್ನು ನಿರ್ವಹಿಸಿದ ಫಾದರ್ ಮರಿಯಪ್ಪ, ತಮ್ಮ ಬಿಚ್ಚು ಮನಸ್ಸಿನ ನೇರನುಡಿಗಳಿಂದ ಪ್ರಸಕ್ತ ವಿಷಯಗಳ ಬಗ್ಗೆ ಮನಮುಟ್ಟುವಂತೆ ಬರೆದರು. ಕರ್ನಾಟಕದ ಕನ್ನಡ ಕ್ರೈಸ್ತ ಪತ್ರಿಕೆಗಳಲ್ಲಿ ನವಜ್ಯೋತಿಗೆ ಅದ್ವಿತೀಯ ಸ್ಥಾನಮಾನವನ್ನು ತಂದುಕೊಟ್ಟರು. ಅವರ ಕಾಲದಲ್ಲೇ ಎಂಟು ಪುಟಗಳ ನವಜ್ಯೋತಿ ಹನ್ನೆರಡಕ್ಕೆ ಬೆಳೆದು ಹದಿನಾರಕ್ಕೆ ಏರಿತು.

1984 ಜೂನ್ ಮಾಸದಿಂದ 1992 ಸಪ್ಟೆಂಬರ್ ತಿಂಗಳವರೆಗೆ ವಂದನೀಯ ಸ್ವಾಮಿ ಜಿ.ವಿ. ಡಿ'ಸೋಜರವರು ನವಜ್ಯೋತಿಯ ಸಂಪಾದಕರಾಗಿ ಕಾರ್ಯವೆಸಗಿದರು. ಹೊಸನಗರ ಧರ್ಮಕೇಂದ್ರದ ಮೇಷಪಾಲರಾಗಿದ್ದ ಅವರು ಧರ್ಮಕ್ಷೇತ್ರದ ಪೂರ್ಣಾವಧಿಯ ಯುವಜನ ಸೇವಾ ನಿರ್ದೇಶಕರಾಗಿಯೂ ನವಜ್ಯೋತಿಯ ಸಂಪಾದಕರಾಗಿಯೂ ಕೆಲಸ ನಿರ್ವಹಿಸಿದರು.

1986 ಫೆಬ್ರವರಿಯಲ್ಲಿ ಸ್ವಾಮಿ ಜಿ.ವಿ. ಡಿ'ಸೋಜರವರು ಸಂತವೇರಿ ಧರ್ಮಕ್ಷೇತ್ರದ ಧರ್ಮಗುರುಗಳಾಗಿ ಚಿಕ್ಕಮಗಳೂರಿನಿಂದ ತೆರಳಿದರು. ಹೊಸ ಧರ್ಮಕೇಂದ್ರದಿಂದ ಚಿಕ್ಕಮಗಳೂರಿಗೆ ಬಂದು ಎರಡೂ ಜವಾಬ್ದಾರಿಗಳನ್ನು ನಿರ್ವಹಿಸುವುದು ಅಷ್ಟೇನೂ ಸಲೀಸಾದ ಕೆಲಸವಾಗಿರಲಿಲ್ಲ. ಆದರೂ ತಮ್ಮ ಧರ್ಮಕೇಂದ್ರದ ಕೆಲಸ ಕಾರ್ಯದ ಜೊತೆಗೆ ನವಜ್ಯೋತಿಗೆ ಆದ್ಯತೆಯನ್ನಿತ್ತು ತಪ್ಪದೆ ಪ್ರತಿ ಮಾಸವೂ ನವಜ್ಯೋತಿಯನ್ನು ಪ್ರಕಟಿಸಿದ್ದು ಅವರ ಪರಿಶ್ರಮಕ್ಕೆ ನಿದರ್ಶನ. ನವಜ್ಯೋತಿಯ ವಿಶೇಷ ಸಂಚಿಕೆ ತಂದರು. ಪುಟ ಪುಟಗಳಿಗೆ ಅಚ್ಚುಕಟ್ಟಾದ ವಿನ್ಯಾಸವನ್ನು ಅಳವಡಿಸಿ ಪತ್ರಿಕೆಯನ್ನು ಸುಂದರಗೊಳಿಸಿದರು.

1992ನೆಯ ಇಸವಿ ಅಕ್ಟೋಬರ್ ತಿಂಗಳಿನಿಂದ ಸ್ವಾಮಿ ಹೆನ್ರಿ ಮಾಡ್ತಾ ಹೆಮಾ ಮಾಗುಂಡಿ ಧರ್ಮಕೇಂದ್ರದಿಂದ ನವಜ್ಯೋತಿಯ ಜವಾಬ್ದಾರಿಯನ್ನು ಹೆಗಲಿಗೇರಿಸಿಕೊಂಡರು. ಅವಿರತವಾಗಿ ಪತ್ರಿಕೆಯ ಶ್ರೇಯಸ್ಸಿಗೆ ದುಡಿದರು. ಕನ್ನಡದ ಕಂಪನ್ನು ಚೆನ್ನುಡಿಯ ಇಂಪನ್ನು ಕ್ರೈಸ್ತ ವಾಚಕರಿಗೆ ಉಣಬಡಿಸಿದರು. ವಿಶೇಷ ಸಂಚಿಕೆಯನ್ನು ತಂದರು. ನಾಡಿನ ಹಿರಿಯ ಲೇಖಕ ನಾ. ಡಿಸೋಜರವರ ನೇತೃತ್ವದಲ್ಲಿ ಬೆಳ್ಳಿ ಮಹೋತ್ಸವದ ಅಂಗವಾಗಿ ಬರಹಗಾರರ ಶಿಬಿರವೊಂದನ್ನು ನಡೆಸಿ ಹೊಸ ಬರಹಗಾರರನ್ನು ತರಬೇತುಗೊಳಿಸಿದರು. ತಮ್ಮ ಮನ ಕುಲಕುವ ಸಂಪಾದಕೀಯ ಗಳಿಂದ ಜನಮನವನ್ನು ಗೆದ್ದರು. ತದನಂತರ ಫಾ. ರೊನಾಲ್ಡ್ ಕಾರ್ಡೋಜಾರವರು ಇದರ ಜವಾಬ್ದಾರಿಯನ್ನು ಹೊತ್ತು ಸಮರ್ಥವಾಗಿ ನಿರ್ವಹಿಸಿದರು.

## ಸ್ನೇಹಜ್ಯೋತಿ

ನವಜ್ಯೋತಿ ಕಾರಣಾಂತರದಿಂದ ತನ್ನ ಹಳೆಯ ಹೆಸರನ್ನು ಕಳೆದುಕೊಂಡು ಸ್ನೇಹಜ್ಯೋತಿ ಎಂದು ಈಗ ಚಿಕ್ಕಮಗಳೂರು ಧರ್ಮಕ್ಷೇತ್ರದ ಮುಖವಾಣಿಯಾಗಿದೆ. ಫಾ. ಅಂತೋಣಿ ರಾಜ್ ಈ ಪತ್ರಿಕೆಯನ್ನು ಸರ್ವಾಂಗ ಸುಂದರವಾಗಿ ತರಲು ಪ್ರಯತ್ನಿಸಿ ಯಶಕಂಡರು. ಪ್ರಸ್ತುತ ಫಾ. ಡೇವಿಡ್ ಪ್ರಕಾಶ್ ಅವರು ಕಳೆದ 8 ವರ್ಷಗಳಿಂದ ಇದರ ಸಂಪಾದಕರಾಗಿ ದುಡಿದು ಪತ್ರಿಕೆಯನ್ನು ಪ್ರಗತಿ ಪಥದತ್ತ ಮುನ್ನಡೆಸುತ್ತಿದ್ದಾರೆ. ಗುರುಮಠದ ಜವಾಬ್ದಾರಿಯೊಂದಿಗೆ ಕ್ರಿಸ್ತ ರಾಜರ ದೇವಾಲಯದ ಉಸ್ತುವಾರಿಯೊಂದಿಗೆ ಪೂಜ್ಯರು ಈ ಪತ್ರಿಕಾ ಕೆಲಸವನ್ನು ಸಮರ್ಥವಾಗಿ ನಿಭಾಯಿಸಿಕೊಂಡು ಹೋಗುತ್ತಿದ್ದಾರೆ.

✣ ✣ ✣

## ಅಮರವಾಣಿ
### ಕಥೋಲಿಕ ಮಾಹಿತಿ ಕೇಂದ್ರ ಹಾಗೂ ಪ್ರಕಾಶನ ಸಂಸ್ಥೆ

"ನೀವು ವಿಶ್ವದ ಎಲ್ಲೆಡೆಗೆ ಹೋಗಿ, ಜಗತ್ತಿನೆಲ್ಲಾ ಶುಭಸಂದೇಶವನ್ನು ಪ್ರಬೋಧಿಸಿ" (ಮಾರ್ಕ್ 16:15) ಎಂಬ ಯೇಸುಕ್ರಿಸ್ತನ ಆದೇಶವನ್ನು ಧ್ಯೇಯವಾಗಿಟ್ಟು ಕೊಂಡು ಕ್ರೈಸ್ತೇತರರಿಗೆ ಶುಭಸಂದೇಶವನ್ನು ತಿಳಿಸಲು ಆರಂಭಿಸಿದ ಸಂಸ್ಥೆಯೇ 'ಅಮರವಾಣಿ.'

1984, ಜೂನ್ ತಿಂಗಳಿನಲ್ಲಿ ಅಂದಿನ ಚಿಕ್ಕ ಮಗಳೂರು ಧರ್ಮಕ್ಷೇತ್ರದ ಬಿಷಪರಾಗಿದ್ದ ಡಾ. ಅಲ್ಫೋನ್ಸ್ ಮತಿಯಾಸ್ ಅವರ ಅಪೇಕ್ಷೆಯ ಮೇರೆಗೆ 'ಅಮರವಾಣಿ' ಕಥೋಲಿಕ ಮಾಹಿತಿ ಕೇಂದ್ರವನ್ನು ಸ್ಥಾಪಿಸ ಲಾಯಿತು. ಬೈಬಲ್ಲಿನಲ್ಲಿರುವ ಕೆಲವು ಅಮೂಲ್ಯ ಜೀವವಾಕ್ಯಗಳು, ವಚನಗಳು, ಸೂಕ್ತಿಗಳು ಮನುಷ್ಯ ಅನುದಿನದ ಜೀವನದಲ್ಲಿ ಉಪಯೋಗಕ್ಕೆ ಬರುವಂಥವು. ಮನುಷ್ಯ ತಾನು ಜೀವನದಲ್ಲಿ ಸೋತಾಗ, ನಿರಾಶೆಯಾದಾಗ, ಖುಷಿಯಾದಾಗ ಈ ಜೀವವಾಕ್ಯಗಳು ನೆರವಿಗೆ ಬರುತ್ತವೆ. ಮುಳುಗುವವನಿಗೆ ಹುಲ್ಲುಕಡ್ಡಿಯೂ ನೆರವಿಗೆ ಬರುತ್ತದೆ ಎನ್ನುತ್ತಾರೆ. ಜೀವನಕ್ಕೆ ಚೈತನ್ಯವನ್ನು, ಉತ್ಸಾಹವನ್ನು, ಹುಮ್ಮಸ್ಸನ್ನು ಬೈಬಲಿನ ವಾಕ್ಯಗಳು ತುಂಬ ಬಲ್ಲವು. ಆದ್ದರಿಂದ ಅಗತ್ಯವುಳ್ಳ ಈ ಜೀವವಾಕ್ಯಗಳನ್ನು ಕೇಳಿದವರಿಗೆ ಅಂಚೆಯ ಮೂಲಕ ಕಳುಹಿಸುವ ಕೆಲಸವನ್ನು ಈ ಸಂಸ್ಥೆ ನಿರ್ವಹಿಸುತ್ತದೆ. ಈ ಕಾರ್ಯವನ್ನು ಫಾ. ಥಾಮಸ್ ಮಾರ್ಟಿಸ್ ಅವರು ನಿರ್ವಂಚನೆಯಿಂದ ಶಕ್ತಿ ಮೀರಿ ಮಾಡುತ್ತಾ ಬಂದಿರುವುದನ್ನು ಗುರುತಿಸಿ, ಬಿಷಪ್ ಮಥಿಯಾಸ್ ಅವರು "ಕಥೋಲಿಕ ಮಾಹಿತಿ ಕೇಂದ್ರ" (Catholic Enquiry Centre) ವನ್ನು ತೆರೆಯುವಂತೆ ಆದೇಶಿಸಿದರು. ಅವರ ಆದೇಶದನ್ವಯ ಕಥೋಲಿಕ ಮಾಹಿತಿ ಕೇಂದ್ರ ಧರ್ಮಕ್ಷೇತ್ರದ ಪ್ರತಿಷ್ಠೆಯ ಸಂಸ್ಥೆಯಾಗಿ ಬೆಳೆದಿದೆ.

ಕಳೆದ ಇಪ್ಪತ್ತು-ಮೂವತ್ತು ವರ್ಷಗಳಿಂದ ನಡೆದು ಬಂದ ಈ ಸೇವಾಕಾರ್ಯಕ್ಕೆ ಬಿಷಪರು ಚಾಲನೆ ನೀಡಿದ್ದೇ ಸರಿ ಅದು ಗರಿಗೆದರಿ ಹಾರುವಂತಾಯಿತು. ಅಮರವಾಣಿ ಹೆಸರಿನಲ್ಲಿ ಈಗ ಧಾಮಿಕ ಪುಸ್ತಕಗಳು ಪ್ರಕಟಗೊಳ್ಳುತ್ತಿವೆ. ನೂರಾರು ಕೃತಿಗಳು ಈಗಾಗಲೇ ಪ್ರಕಟವಾಗಿವೆ. ಅಮರವಾಣಿ ಪ್ರಕಾಶನದ ನಿರ್ದೇಶಕರಾಗಿ ಫಾ. ಪಾಸ್ಕಲ್

ಮರಿಯಪ್ಪ, ಫಾ, ಫ್ರಾನ್ಸಿಸ್ ರಸ್ಕೀನಾ, ಅತ್ಯುತ್ಸಾಹದಿಂದ ಕಾರ್ಯವೆಸಗಿದ್ದಾರೆ. ಪ್ರಸಕ್ತ ಫಾ. ಮೋಸೆಸ್ ಇದರ ನಿರ್ದೇಶಕರಾಗಿದ್ದಾರೆ. ಕ್ರಿಸ್ತನ ಶುಭಸಂದೇಶದ ಪ್ರಚಾರ ಕಾರ್ಯವನ್ನು ಚಿಕ್ಕಮಗಳೂರು ಧರ್ಮಕ್ಷೇತ್ರ ತನ್ನದೇ ಆದ ರೀತಿಯಲ್ಲಿ ಮಾಡುತ್ತಾ ಬಂದಿದೆ. ಈಗಿನ ಬಿಷಪ್ ಅಂತೋಣಿಸ್ವಾಮಿ ಅವರು ಅದರ ಚಾಲಕ ಶಕ್ತಿಯಾಗಿದ್ದಾರೆ.

**ಅಮರವಾಣಿಯ ಪ್ರಮುಖ ಲೇಖಕರು :**

1. ಫಾ. ಜೋ ಮೇರಿ ಲೋಬೊ, 2. ಫಾ. ಹೆನ್ರಿ ಮಾಡ್ತಾ, 3. ಫಾ. ಜೀವಿ, 4. ಫಾ. ಶಾಂತರಾಜು, 5. ಫಾ. ಮಾರ್ಸೆಲ್ ಜೆ. ಪಿಂಟೋ, 6. ಫಾ. ಜಾರ್ಜ್ ಡಿಸೋಜಾ, 7. ಫಾ. ಪಾಸ್ಕಲ್ ಮರಿಯಪ್ಪ, 8. ಫಾ. ರೊನಾಲ್ಡ್ ಕರ್ಡೋಜಾ, 9. ಫಾ. ವಿಜಯಕುಮಾರ್, 10. ಫಾ. ಚಾರ್ಲ್ಸ್ ಪಿರೇರಾ, 11. ಫಾ. ಡೇವಿಡ್ ಪ್ರಕಾಶ್, 12. ಫಾ. ಗಿಲ್ಬರ್ಟ್ ಪಿಂಟೊ, 13. ಫಾ. ಥಾಮಸ್ ಮಾರ್ಟಿಸ್, 14. ಫಾ. ಫ್ರಾನ್ಸಿಸ್ ರಸ್ಕಿನಾ, 15. ಫಾ. ಅತೋಣಿರಾಜ್, 16. ಫಾ. ಫ್ರಾನ್ಸಿಸ್ ಮನಪುರಂ, 17. ಫಾ. ವಲೇರಿಯನ್ ಕ್ಯಾಸ್ಟಲಿನೊ, 18. ಫಾ. ಜೇಮ್ಸ್ ಮುಂತಾದವರು.

**ಅಮರವಾಣಿಯ ಪ್ರಮುಖ ಪ್ರಕಟಣೆಗಳು :**

1. ಕೃಪಾ ಪ್ರವಾಹ (ಸಪ್ತ ಸಂಸ್ಕಾರಗಳು)–1978, 2. ಬೈಬಲ್ ಅಧ್ಯಯನ ಕೈಪಿಡಿ–1979, 3. ಬೈಬಲ್ ಭಾನುವಾರ–1983, 4. ಶಿಲುಬೆ ಯಾತ್ರೆ–1984, 5. ವಿಶ್ವಾಸ ಪ್ರಮಾಣ–1985, 6. ಸನ್ಮಾರ್ಗ(1)–1985, 7. ಸನ್ಮಾರ್ಗ(2)–1986, 8. ಪ್ರತಿಷ್ಠಾ ಪ್ರಾರ್ಥನೆಗಳು, (ಮಕ್ಕಳ ಮತ್ತು ಸಂಧಾನ ಪೂಜೆ)–1986, 9. ದೃಢೀಕರಣ–1987, 10. ಸನ್ಮಾರ್ಗ(3)–1987, 11. ನೀತಿ ಮಾರ್ಗ(1)–1988, 12. ನೀತಿಮಾರ್ಗ(2)–1990, 13. ಕ್ರಿಸ್ತದರ್ಶನ–1991, 14. ನೀತಿಮಾರ್ಗ(3)–1992, 15. ರಕ್ಷಕ ಯೇಸು–1997, 16. ಕ್ರಿಸ್ತರ ಹೆಜ್ಜೆಯಲ್ಲಿ–1997, 17. ಮರಿಯಾ ಜಯಂತಿ–1999, 18. ನಮ್ಮೊಡನೆ ತಂಗಿರಿ ಸ್ವಾಮಿ–2004, 19. ಸಂತ ಜೋಸೆಫರ ಭಕ್ತಿಮಾಲೆ–2006, 20. ಕಥಾಸಂಗಮ, 21. ಪಾಲನಾ ಸಮಿತಿಯ ನಿಯಮಾವಳಿ–2009, 22. ಜೀವನ ಕಥನ–1990, 23. ಕೃಪಾ ಪ್ರವಾಹ–1988, 24. ನಿತ್ಯಜೀವಕ್ಕೆ ಮಾರ್ಗದರ್ಶನ (7std), 25. ಕ್ರಿಸ್ತ ದರ್ಶನ–1990, 26. ಕ್ರಿಸ್ತರೊಂದಿಗೆ ಮುನ್ನಡೆ–1191, 27. ಸಂತ ಅಂತೋಣಿಯವರ ನವೇನಾ, 28. ದಿವ್ಯ ಯೇಸು ಬಾಲರ ನವೇನಾ, 29.ಪೀಠ ಸೇವಕರ ಕೈಪಿಡಿ, 30. ಮಾತೆಗೊಂದು ಮನವಿಮಾಲೆ (ಹೆಮಾ), 31. ಜೀವನ ಕಥನ (ಹೆಮಾ), 32. ಶಿಲುಬೆಯ ಹಾದಿ (ಜೀವಿ), 33. ಶುಭವಿವಾಹ (ಜೇಬಿ ಕ್ಯಾಸ್ಟಲಿನೋ). 34. ನ್ಯಾಯದ ನೇಣು (ಧಾರ್ಮಿಕ ನಾಟಕ), 35. ಸಂತ ರತ್ನಗಳು, 36. ಸಂತರ ಜೀವನ ಚರಿತ್ರೆ, 37. ಶೃತಿಗಾನ–ಸಂಗೀತ ಸಂಕಲನ, 38. ಸೌರಭ ಅಮೃತ, 39. ಬೈಬಲ್ ರಸಪ್ರಶ್ನೆಗಳು (1993), 40. ಬೈಬಲ್ ಪ್ರಾರ್ಥನೆಗಳು (ಮನಪುರಂ)

✣ ✣ ✣

## ಹಾಸ್ಟೆಲ್, ಬೋರ್ಡಿಂಗ್ ಮತ್ತು ಅನಾಥಾಲಯಗಳು

1. ಅನುಗ್ರಹ ಬಾಲಕ ಮತ್ತು ಬಾಲಕಿಯರ ಬೋರ್ಡಿಂಗ್
   ಸುವಾರ್ತಕಾರಕಾಲ ಸಂತ ಯೊವಾನ್ನರ ದೇವಾಲಯ, ಅರೇಹಳ್ಳಿ.
2. ಆವೆ ಮರಿಯಾ ಮಕ್ಕಳ ಮನೆ
   ಆವೆ ಮರಿಯಾ ಕಾನ್ವೆಂಟು, ಮಗ್ಗೆ
3. ಬಾಲಕಿಯರ ಬೋರ್ಡಿಂಗ್
   ಆಕ್ಸೇಲಿಯಂ ಸ್ನೇಹಾಲಯ, ಜೋಸೆಫ್‌ನಗರ
4. ಬಾಲಕ ಮತ್ತು ಬಾಲಕಿಯರ ಬೋರ್ಡಿಂಗ್
   ಸಂತ ಮಾರ್ತಾಸ್ ಕಾನ್ವೆಂಟು, ಮೂಡಿಗೆರೆ
5. ಬಾಲಕರ ಬೋರ್ಡಿಂಗ್
   ಸಂತ ಅಲ್ಫೋನ್ಸರ ದೇವಾಲಯ, ಅಲ್ಫೋನ್ಸ್‌ನಗರ
6. ಬಾಲಕರ ಬೋರ್ಡಿಂಗ್
   ಸಂತ ಮೈಕಲ್ಸ್ ದೇವಾಲಯ, ಬೇಲೂರು
7. ಬಾಲಕರ ಬೋರ್ಡಿಂಗ್
   ಸ್ವರ್ಗಾರೋಹಣ ದೇವಾಲಯ, ದಾಸಾಪುರ
8. ಬಾಲಕರ ಬೋರ್ಡಿಂಗ್
   ಸಂತ ಫ್ರಾನ್ಸಿಸ್ ಜೇವಿಯರ್ ದೇವಾಲಯ, ಮಗ್ಗೆ
9. ಬಾಲಕರ ಬೋರ್ಡಿಂಗ್
   ಸಂತ ಅಂತೋಣಿಯವರ ದೇವಾಲಯ, ಮೂಡಿಗೆರೆ.
10. ಬಾಲಕಿಯರ ಬೋರ್ಡಿಂಗ್
    ಸಂತ ಅರ್ಸುಲಾ ಕಾನ್ವೆಂಟು, ಮಾಗುಂಡಿ
11. ಕ್ರಿಸ್ತಪ್ರಭಾ ಮಕ್ಕಳ ಮನೆ
    ಕ್ರಿಸ್ತಪ್ರಭಾ ಕಾನ್ವೆಂಟು, ಜಯಪುರ
12. ದಿವ್ಯಜ್ಯೋತಿ ಆಶ್ರಮ ಬೋರ್ಡಿಂಗ್
    ಪವಿತ್ರ ಹೃದಯ ಕಾನ್ವೆಂಟು, ಬಸರೀಕಟ್ಟೆ
13. ತಾಂತ್ರಿಕ ವಿದ್ಯಾರ್ಥಿಗಳ ಡಾನ್ ಬಾಸ್ಕೋ ಬೋಡಿಂಗ್
    ಡಾನ್ ಬಾಸ್ಕೋ, ಹಾಸನ.

## ಆಸ್ಪತ್ರೆ ಮತ್ತು ಆರೋಗ್ಯಕೇಂದ್ರಗಳು

1. ಫಾತಿಮಾ ಡಿಸ್ಪೆನ್ಸರಿ
ಫಾತಿಮಾಪುರ, ಅಂಕಿಹಳ್ಳಿ ಅಂಚೆ
ಬಿಕ್ಕೋಡು ಮಾರ್ಗ, ಹಾಸನ ಜಿಲ್ಲೆ – 573 215.

2. ಜನಸೇವಾಮಂದಿರದ ಹೋಮಿಯೊ ಕ್ಲಿನಿಕ್
ಗಂಡಸಿ ಹ್ಯಾಂಡ್‌ಪೋಸ್ಟ್ ಹತ್ತಿರ, ಲಲನಕೆರೆ ಅಂಚೆ
ಹಾಸನ ಜಿಲ್ಲೆ – 573 164.

3. ಕರುಣಮಾತಾ ಹೊಲಿಸ್ಟಿಕ್ ಹೆಲ್ತ್‌ಕೇರ್ ಸೆಂಟರ್
ಗಾಡೇನಹಳ್ಳಿ ಅಂಚೆ, ಶಾಂತಿಗ್ರಾಮ ಮಾರ್ಗ
ಹಾಸನ ಜಿಲ್ಲೆ – 573 220.

4. ಹೋಲಿಕ್ರಾಸ್ ಹೆಲ್ತ್ ಸೆಂಟರ್
ಬಸ್ಕಲ್ ಅಂಚೆ, ಮೂಡಿಗೆರೆ ಮಾರ್ಗ
ಚಿಕ್ಕಮಗಳೂರು ಜಿಲ್ಲೆ – 577 132.

5. ಹೋಲಿಕ್ರಾಸ್ ಹಾಸ್ಪಿಟಲ್
ಹೌಸಿಂಗ್ ಬೋರ್ಡ್‌ಕಾಲೋನಿ, ಜ್ಯೋತಿನಗರ ಅಂಚೆ
ಚಿಕ್ಕಮಗಳೂರು – 577 102.

6. ಹೋಲಿಕ್ರಾಸ್ ಹೆಲ್ತ್ ಸೆಂಟರ್
ನೆಹರು ನಗರ, ಬೇಲೂರು ಅಂಚೆ
ಹಾಸನ ಜಿಲ್ಲೆ – 573 115.

7. ಶಾಂತಿ ನಿವಾಸ ಡಿಸ್ಪೆನ್ಸರಿ
ಬೆಟ್ಟದ ಮನೆ ಅಂಚೆ
ಚಿಕ್ಕಮಗಳೂರು ಜಿಲ್ಲೆ – 577 132

8. ಸಂತ ತೆರೆಸಾ ಡಿಸ್ಪೆನ್ಸರಿ
ತೆರೇಸಾಪುರ, ಮುತ್ತನಗೆರೆ ಅಂಚೆ,
ಕಡೂರು ತಾಲೂಕು, ಚಿಕ್ಕಮಗಳೂರು ಜಲ್ಲೆ – 573 132.

## ಧರ್ಮಕ್ಷೇತ್ರದಲ್ಲಿ ಸೇವೆಗೈದು ಮೃತರಾದ ಧರ್ಮಗುರುಗಳು

1. ವಂ. ಫಾ. ಚಿನ್ನಪ್ಪ ಎಸ್. (07.04.1921)
ಗುರುದೀಕ್ಷೆ : 19.12.1950.
ಮರಣ : 28.11.1966 ಭದ್ರಾವತಿ
2. ವಂ. ಫಾ. ಅಗುಸ್ಟಿನ್ ಎಫ್. ಡಿಸೋಜ (18.03.1903)
ಗುರುದೀಕ್ಷೆ : 13.02.1943
ಮರಣ : 21.12.1929 ಮಂಗಳೂರು
3. ವಂ. ಫಾ. ಫಿದೆಲಿಸ್ ಪಿಂಟೊ (07.02.1912)
ಗುರುದೀಕ್ಷೆ : 13.02.1943
ಮರಣ : 30.06.1971 ತೀರ್ಥಹಳ್ಳಿ
4. ವಂ. ಫಾ. ಅಗಸ್ಟಿನ್ ಫೆರ್ನಾಂಡಿಸ್ (05.03.1908)
ಗುರುದೀಕ್ಷೆ : 21.11.1943
ಮರಣ : 16.03.1979 ಸಿದ್ದಾಪುರ
5. ವಂ. ಫಾ. ಎಡ್ವರ್ಡ್ ಬಿ. ನೊರೊನಾ (23.03.1911)
ಗುರುದೀಕ್ಷೆ : 13.02.1942
ಮರಣ : 16.05.1979 ಅಲ್ದಾನ, ಗೋವಾ
6. ವಂ. ಫಾ. ಇಮ್ಮಾನುವೆಲ್ ಜೊವಟ್ಟು ಕುನ್ನೆಲ್ (25.06.1921)
ಗುರುದೀಕ್ಷೆ : 08.12.1949
ಮರಣ : 10.04.1980 ಹಾಸನ
7. ಅತಿ ವಂ. ಮೊ. ಅಂಜೆಲೊ ಫೆರ್ನಾಂಡಿಸ್ (30.03.1916)
ಗುರುದೀಕ್ಷೆ : 21.11.1943
ಮರಣ : 10.04.1980 ಚಿಕ್ಕಮಗಳೂರು
8. ವಂ. ಫಾ. ಫಲ್ಜೆನ್ಸ್ ಲೊಪೆಜ್ (02.01.1914)
ಗುರುದೀಕ್ಷೆ : 16.07.1942
ಮರಣ : 28.01.1985 ಬ್ರೆಜಿಲ್

9. ವಂ. ಫಾ. ಮತಿಯಾಸ್ ನೊರೋನ (28.08.1900)
ಗುರುದೀಕ್ಷೆ : 19.12.1925
ಮರಣ : 06.10.1985 ಚಿಕ್ಕಮಗಳೂರು

10. ವಂ. ಫಾ. ಜೋಸೆಫ್ ಡಿಸೋಜ (17.12.1905)
ಗುರುದೀಕ್ಷೆ : 17.12.1932
ಮರಣ : 09.08.1988 ಮಂಗಳೂರು

11. ಅತಿ ವಂ.ಮೊ. ಜಾರ್ಜ್ ಪಿ.ದ.ಪಿ. ಸಿಕ್ವೇರಾ (22.06.1914)
ಗುರುದೀಕ್ಷೆ : 16.07.1942
ಮರಣ : 09.05.1991 ಗೋವಾ

12. ವಂ. ಫಾ. ನೆಲ್ಸನ್ ರಾಕ್‌ವಾಜ್ (25.11.1918)
ಗುರುದೀಕ್ಷೆ : 02.04.1949
ಮರಣ : 18.06.1994 ಬೆಂಗಳೂರು

13. ವಂ. ಫಾ. ಜೋಸ್ ಅಲೆಕ್ಸಿಯೊ ಪಿರೇರ (13.07.1909)
ಗುರುದೀಕ್ಷೆ : 29.06.1943
ಮರಣ : 17.03.1998 ಗೋವಾ

14. ವಂ. ಫಾ. ವಿಕ್ಟರ್ ಸೆರಾವೊ (01.06.1935)
ಗುರುದೀಕ್ಷೆ : 06.06.1963
ಮರಣ : 17.02.2000 ಚಿಕ್ಕಮಗಳೂರು

15. ವಂ. ಫಾ. ಶಾಂತಪ್ಪ. ಎ. (16.11.1963)
ಗುರುದೀಕ್ಷೆ : 28.05.1991
ಮರಣ : 13.01.2003 ಚಿಕ್ಕಮಗಳೂರು

16. ವಂ. ಫಾ. ಜೇಮ್ಸ್ ಕೆ.ವಿ. (12.09.1959)
ಗುರುದೀಕ್ಷೆ : 29.04.1986
ಮರಣ : 03.03.2004 ಕಣ್ಣೂರ್, ಕೇರಳ

17. ವಂ. ಫಾ. ಜೋಸೆಫ್ ಡಿಸೋಜ (04.11.1938)
ಗುರುದೀಕ್ಷೆ : 03.05.1966
ಮರಣ : 29.06.2009 ಚಿಕ್ಕಮಗಳೂರು

18. ವಂ. ಫಾ. ಮ್ಯಾಥ್ಯು ಕೆ.ಎ. (29.02.1924)
ಗುರುದೀಕ್ಷೆ : 29.02.1924
ಮರಣ : 24.10.2011 ಚಿಕ್ಕಮಗಳೂರು.

✣ ✣ ✣